ಸೆಂಟರ್ ತಲುಪಿದ್ದಳು. ಹತ್ತು ಗಂಟೆ ಅಂದರೆ ಹತ್ತು ಸೆಕೆಂಡು ಹೆಚ್ಚು ಕಮ್ಮಿಯಿಲ್ಲದೇ ಮೀಟಿಂಗ್ ಆರಂಭಿಸುವ ಸೆಂಟರಿನ ಮುಖ್ಯಸ್ಥ ಆನಂದ ಜೋಶಿಯವರು ತಡವಾಗಿ ಆಗಮಿಸುವವರನ್ನು ಮೂಗಿನ ತುದಿಯಲ್ಲಿ ಇನ್ನೇನು ಬೀಳುವಂತಿರುತ್ತಿದ್ದ ಕನ್ನಡಕದೊಳಗಿಂದ ತೂರಿ ಬರುವ ತೀಕ್ಷ್ಣ ದೃಷ್ಟಿಯಿಂದ ಒಮ್ಮೆ ದಿಟ್ಟಿಸಿ ನೋಡಿದರೆ, ಅವರಿಗೆ ಈ ತಡವಾಗಿ ಬಂದಿರುವುದು ಇಷ್ಟವಿಲ್ಲ ಎಂದು ಅರಿವಾಗುತ್ತದೆ. ಕಳೆದ ಮೂರೂ ಮೀಟಿಂಗಿಗೆ ತಡವಾಗಿ ಬಂದ ಕುಲಕರ್ಣಿಯನ್ನು ಸೂಚ್ಯವಾಗಿ ಎಚ್ಚರಿಸಿದ್ದರು.

ಎಲ್ಲ ನೆನಪಾಗಿ ಮೀಟಿಂಗಿನಲ್ಲಿ ಕೊಡಬೇಕಿದ್ದ ಪ್ರಾಜೆಕ್ಟಿನ ಪೇಪರುಗಳನ್ನೆಲ್ಲ ನೋಡಿ, ಝೆರಾಕ್ಸ್ ಪ್ರತಿಗಳನ್ನು ನೋಡಿ ಬ್ಯಾಗಿಗೆ ತುಂಬಿದಳು. ಯಾರು ಕೇಳದಿದ್ದರೂ ಪುಣೆಯಿಂದ ಬರುವ ಆ ಕುಲಕರ್ಣಿ ಝೆರಾಕ್ಸ್ ಕೇಳಿಯೇ ಕೇಳುತ್ತಾನೆ. ಕಳೆದ ಬಾರಿಯ ಮೀಟಿಂಗಿನಲ್ಲೂ ಪಕ್ಕದಲ್ಲೇ ಕೂತು ಹೆಸರು ಕೇಳಿ, 'ಅರೇ, ಕೇತಕಿ ವೇಲಣಕರ್. ಆಮ್ಚಿ ಮುಲ್ಗಿ' ಎಂದು ಮರಾಠಿಯಲ್ಲಿ ಸಂಭಾಷಣೆ ಆರಂಭಿಸಿದ್ದ. 'ಇಲ್ಲ, ನನ್ನ ಸರ್‌ನೇಮ್ ಅಷ್ಟೇ ಮರಾಠೀದು. ನಾನು ಅಪ್ಪಟ ಕನ್ನಡತಿ. ನನ್ನ ಅಪ್ಪ, ಅಜ್ಜ, ಮುತ್ತಜ್ಜರಾದಿಯಾಗಿ ಎಲ್ಲರೂ ಕನ್ನಡದವರೇ' ಎಂದು ಅರ್ಥ ಮಾಡಿಸುವಷ್ಟರಲ್ಲಿ ಸಾಕು ಸಾಕಾಗಿತ್ತು. ಅಧಿಕಪ್ರಸಂಗಿ, ಆದರೂ ಬಿಟ್ಟಿರಲಿಲ್ಲ. 'ನೀವು ಮೂಲತಃ ಮರಾಠಿಜನ. ಅದಕ್ಕೇ ಇಷ್ಟು ಸ್ಮಾರ್ಟ್' ಎಂದು ಇಲ್ಲದ ಪುರಾಣ ಬಿಟ್ಟಿದ್ದ. ಕುಲಕರ್ಣಿ ಜೊತೆಯಲ್ಲಿ ಬಂದಿದ್ದ ರಮಾಕಾಂತ ಬೇಡೆಕರ್ ಕೇತಕಿಯ ಮುಜುಗರ ನೋಡಿ ನಕ್ಕಿದ್ದರು. ಬೆಳಗಿನ ಸೆಶನ್ ಮುಗಿದು ಊಟದ ಹೊತ್ತಿಗೂ ಹಿಂದೆ ಮುಂದೆ ಓಡಾಡಿಕೊಂಡಿದ್ದ ಕುಲಕರ್ಣಿಯಿಂದ ತಪ್ಪಿಸಿಕೊಳ್ಳಲು ಆರ್ಟ್ ಸೆಂಟರಿನ ಮುಖ್ಯಸ್ಥ ಆನಂದ ಜೋಶಿಯವರೊಂದಿಗೆ ಪ್ರಾಜೆಕ್ಟಿನ ವಿಷಯ ಮಾತಾಡುವ ನೆಪ ಹೂಡಿ, ಕೇತಕಿ, ಊಟದ ತಟ್ಟೆ ಹಿಡಿದು ಅವರ ಪಕ್ಕದ ಸೀಟು ಹಿಡಿದಿದ್ದಳು.

ಎಲ್ಲ ನೆನಪಾಗಿ ಕೇತಕಿಗೆ ನಗು ಬಂತು. ಬ್ಯಾಗನ್ನು ಹೆಗಲಿಗೇರಿಸಿಕೊಂಡು ರೂಮಿನ ಬಾಗಿಲನ್ನು ಎಳೆದುಕೊಂಡು ಗೆಸ್ಟ್ ಹೌಸಿನ ಮೆಟ್ಟಿಲಿಳಿದು ಹೊರಬಂದಳು. ಗೆಸ್ಟ್ ಹೌಸಿನ ಪಕ್ಕದ್ದೇ ದೊಡ್ಡ ಕಟ್ಟಡ, ಆರ್.ಜಿ. ಆರ್ಟ್ಸ್ ಸೆಂಟರ್. ಅಬ್ಬಾ, ಅದೆಷ್ಟು ಸುಂದರ ಈ ಆರ್ಟ್ಸ್ ಸೆಂಟರಿನ ಕಲ್ಪನೆ ಎಂದುಕೊಳ್ಳುತ್ತಾ ಕಟ್ಟಡದ ಮೆಟ್ಟಿಲು ಹತ್ತಿ ಸಭಾಂಗಣದ ಮುಂದಿದ್ದ ಮ್ಯೂರಲ್ ಆರ್ಟಿನ ಕಲಾಕೃತಿ ನೋಡಲಾರಂಭಿಸಿದಳು. ಮುಂದೆ ದೀಪದ ಗೊಂಚಲಿನಂತೆ ಆಳೆತ್ತರದ ಮಣ್ಣಿನ ಕಲಾಕೃತಿಗಳು. ಇನ್ನೂ ಒಂಬತ್ತುವರೆಯಷ್ಟೇ ಎಂದುಕೊಂಡು ನಿಧಾನಕ್ಕೆ ಕಲಾಕೃತಿಗಳ ಸೌಂದರ್ಯ ನೋಡುತ್ತಾ ನಿಂತವಳಿಗೆ ಹಿಂದಿನಿಂದ 'ಕೇತಕಿ, ನಮಸ್ತೆ' ದನಿ ಕೇಳಿ ತಿರುಗಿದಳು. ಪುಣೆಯ ರಮಾಕಾಂತ ಬೇಡೆಕರ್ ನಗುತ್ತಾ ನಿಂತಿದ್ದರು. 'ನಮಸ್ಕಾರ್ ಸರ್' ಎಂದು ಬೇಡೆಕರ್‌ಗೆ ಹೇಳಿ ಪಕ್ಕದಲ್ಲಿದ್ದವನ ಕಡೆ ಸಹಜವಾಗಿ ದೃಷ್ಟಿ ಹೋದಾಗ ಒಮ್ಮೆಲೇ ಕಣ್ಣಿನಲ್ಲಿ ಮಿಂಚು ಕಂಡು ಮಾಯವಾಯಿತು. ಅದೇ ನಗು, ಅದೇ ಎತ್ತರ, ಅದೇ ನಗುವ ಶಾಂತ ಕಣ್ಣು. ಅಬ್ಬಾ ಇಷ್ಟೊಂದು ಹೋಲಿಕೆ. ಗಂಡ ಶಂಕರನ ಪ್ರತಿರೂಪದ ಈ ವ್ಯಕ್ತಿ ಯಾರು? ಕೇತಕಿಯ ಅಚ್ಚರಿ ನೋಡಿ, ರಮಾಕಾಂತ ಬೇಡೆಕರ್, 'ಮುಕುಂದ್ ಜೋಶಿ, ಆರ್ಕಿಯಾಲಾಜಿಸ್ಟ್. ನನ್ನೊಂದಿಗೆ ಬಂದಿದ್ದಾರೆ' ಎಂದು ಪರಿಚಯಿಸುತ್ತಾ ಅವರಿಗೂ ಕೇತಕಿಯನ್ನೂ ಪರಿಚಯಿಸಿದರು. 'ನಮಸ್ಕಾರ್' ಎನ್ನುತ್ತಿದ್ದಂತೆಯೇ ದನಿಯ ಗಟ್ಟಿತನ ಕೇಳಿ ಕೇತಕಿಯ ಮೈ ಅವಳ ಅರಿವಿಲ್ಲದೆಯೇ ಕಂಪಿಸಿತು. ಇಷ್ಟೊಂದು ಹೋಲಿಕೆ! ರಾಮ್ ಔರ್ ಶ್ಯಾಮ ಥರ!!

ಬೇಡೆಕರ್ ಮಾತಾಡುತ್ತಿದ್ದರೂ ಕೇತಕಿ ಇನ್ನೂ ಈ ಅಚ್ಚರಿಯಿಂದ ಹೊರಬಂದಿರಲಿಲ್ಲ. ಅಬ್ಬಾ ಹೀಗೂ ಸಾಮ್ಯತೆ ಇದೆಯೇ! ಶಂಕರ ಹಣೆಯ ಮೇಲಿನ ಜೊಂಪೆ ಕೂದಲನ್ನು ಕೈಯಿಂದ ಪದೇ ಪದೇ ತೀಡುವಂತೆ ಮುಕುಂದ್ ಜೋಶಿಯೂ ಕೂದಲು ತೀಡಿದಾಗ ಕೇತಕಿಗೆ ಅಚ್ಚರಿಯ ಮೇಲೆ ಅಚ್ಚರಿ. ಬಹುಶಃ ಹಣೆ ಮೇಲೆ ಜೊಂಪೆ ಕೂದಲಿದ್ದವರು ಹೀಗೆ ಪದೇ ಪದೇ ತೀಡಿಕೊಳ್ಳುವುದೂ